ಕರ್ನಾಟಕ ಸರ್ಕಾರ

ಸಂ: ಸಿ1/ಸಿಆರ್-06/2020

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಅಂಚೆಚೀಲ-5313, ಬಹುಮಹಡಿ ಕಟ್ಟಡ,
1ನೇ ಗೇಟ್, 2ನೇ ಮಹಡಿ,
ಬೆಂಗಳೂರು, ದಿನಾಂಕ: 11.9.2020

ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 (ಕರ್ನಾಟಕ ಕಾಯ್ದೆ 10/1962) ತಿದ್ದುಪಡಿ ಮಾಡಿರುವ ಬಗ್ಗೆ.

**ಉಲ್ಲೇಖ:** 1. ಕರ್ನಾಟಕ ರಾಜ್ಯ ಪತ್ರ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ: 286, ದಿ:13.07.2020 ರಲ್ಲಿ ಪ್ರಕಟವಾಗಿರುವ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯದ ಅಧಿಸೂಚನೆ ಸಂಖ್ಯೆ: DPAL 39 SHASANA 2020, BENGALURU, ದಿನಾಂಕ: 13.07.2020.

2. ಈ ನ್ಯಾಯಾಧಿಕರಣದ ಸಮಸಂಖ್ಯೆಯ ಪತ್ರ ದಿನಾಂಕ: 22.07.2020.

3. ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 23 ಆರ್‌ಎಂಇ 2020, ದಿ: 10.09.2020.

***

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಲ್ಲಿ the Karnataka Land Reforms (Amendment) Ordinance, 2020 ನ್ನು ಜಾರಿಗೆ ತಂದಿದ್ದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 (ಕರ್ನಾಟಕ ಕಾಯ್ದೆ 10/1962) ರಲ್ಲಿ ಹಲವು ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಇದರಲ್ಲಿ ಕಲಂ 63, 70, 72, 80, 81, 104, 109 ಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ ಹಾಗೂ ಕಲಂ 79A, 79B ಮತ್ತು 79C ಗಳನ್ನು ತೆಗೆದುಹಾಕಲಾಗಿರುತ್ತದೆ.

ಉಲ್ಲೇಖ (2)ರ ಈ ನ್ಯಾಯಾಧಿಕರಣದ ಪತ್ರದಲ್ಲಿ ಕೆಲವು ಅಂಶಗಳ ಕುರಿತು ಸರ್ಕಾರದ ಸ್ಪಷ್ಟೀಕರಣವನ್ನು ಕೋರಲಾಗಿತ್ತು.

ಉಲ್ಲೇಖ (3)ರಲ್ಲಿ ಸರ್ಕಾರದಿಂದ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿರುತ್ತದೆ.

> *..............."Section 79A, 79B and 79C have been omitted from the principal Act. All the cases pending on the date of publication of the Karnataka Land Reforms (Amendment) Ordinance 2020, pertaining to Section 79A, 79B and 79C and consequential thereof shall stand abated. The Legislative intent of the Saving Clause (2)* ***all pending cases*** *would mean to include appeals also, since the claims of the*

*parties under section 79A and 79B stand abated and extinguished. The question of preferring an appeal from any orders under section 79A, 79B and 79C prior to notification dated 13.07.2020 of the Land Reforms (Amendment) Ordinance, 2020 do not survive for consideration. Hence, question of preferring new appeal does not arise."*

ಆದುದರಿಂದ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ನ್ಯಾಯಾಧಿಕರಣದ ಶಾಖೆಗಳಲ್ಲಿ ಕೆಳಕಂಡಂತೆ ತಕ್ಷಣದಿಂದ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

1. ಕಛೇರಿಯ ಕಂದಾಯ ಶಾಖೆಯ ಅಧೀಕ್ಷಕರಿಗೆ–ಈಗಾಗಲೇ ದಾಖಲಾಗಿ ಸ್ಕ್ರೂಟಿನಿ ಹಂತದಲ್ಲಿರುವ ಪ್ರಕರಣಗಳಿಗೆ ಒಂದು ದಿನಾಂಕವನ್ನು ನಿಗದಿಪಡಿಸಿ ಮುಂದಿನ ಕ್ರಮಕ್ಕಾಗಿ ನ್ಯಾಯಪೀಠದ ಮುಂದೆ ಮಂಡಿಸಲು ಕಡತವನ್ನು ಸಲ್ಲಿಸಲು ಸೂಚಿಸಿದೆ.
2. ಕಛೇರಿಯ ಜ್ಯೂಡಿಷಿಯಲ್ ಸರ್ವೀಸ್ ಕೌಂಟರ್ (J.S.C) ದಿನಾಂಕ: 11.09.2020 ರಿಂದ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ 79A, 79B ಮತ್ತು 79C ಗಳಡಿ ಉಲ್ಲೇಖ (1)ರ ಅಧಿಸೂಚನೆಯ ಪೂರ್ವ ಮಾಡಿರುವ ಯಾವುದೇ ಆದೇಶಗಳ ವಿರುದ್ಧ ಮೇಲ್ಮನವಿಗಳನ್ನು ದಾಖಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಸ್ಪಷ್ಟೀಕರಣ ನೀಡಿರುವ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಪಟ್ಟ ಯಾವುದೇ ಹೊಸ ಪ್ರಕರಣಗಳನ್ನು ಸ್ವೀಕರಿಸದಿರಲು ಸೂಚಿಸಿದೆ.

(ಮಾನ್ಯ ಛೇರ್ಮನ್‌ರವರ ಅನುಮೋದನೆಯೊಂದಿಗೆ)

11/9/20
ನಿಬಂಧಕರು,
ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ
ಬೆಂಗಳೂರು.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಇವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಛೇರ್ಮನ್‌ರವರ ಆಪ್ತ ಶಾಖೆ, ಕೆಎಟಿ.
3. ಮಾನ್ಯ ಕಂದಾಯ ಸದಸ್ಯರಿಗೆ, ಕೆಎಟಿ.
4. ಮಾನ್ಯ ಜಿಲ್ಲಾ ನ್ಯಾಯಾಧೀಶ ಸದಸ್ಯರುಗಳಿಗೆ, ಕೆಎಟಿ.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕೆಎಟಿ.
6. ನಿಬಂಧಕರ ಆಪ್ತ ಶಾಖೆ, ಕೆಎಟಿ.
7. ಉಪನಿಬಂಧಕರು, ಕೆಎಟಿ,
8. ಸಹಾಯಕ ನಿಬಂಧಕರು, ಕಂದಾಯ, ಕೆಎಟಿ,
9. ಶಾಖಾಧೀಕ್ಷಕರು, ಕಂದಾಯ ಶಾಖೆ, ಕೆಎಟಿ,
10. ಪೀಠಾಧೀಕ್ಷಕರು, ನ್ಯಾಯಪೀಠ 1 & 2, ಕೆಎಟಿ.
11. ವಿಷಯ ನಿರ್ವಾಹಕರು, ನ್ಯಾಯಪೀಠ 1 & 2. ಕೆಎಟಿ.
12. ಶಿಬಿರ ವಿಷಯ ನಿರ್ವಾಹಕರು, ಕಂದಾಯ ಶಾಖೆ. ಕೆಎಟಿ.
13. ಜುಡಿಷಿಯಿಲ್ ಸರ್ವೀಸ್ ಕೌಂಟರ್, ಕೆ.ಎ.ಟಿ. ಕೆಎಟಿ.
14. ಸೂಚನಾ ಫಲಕ,
15. ರಕ್ಷಕ ಕಡತ.